ಸ್ತ್ರೀವಾದಿ ಮನಃಶಾಸ್ತ್ರ, ಸ್ತ್ರೀವಾದಿ ಸಾಹಿತ್ಯ, ಸ್ತ್ರೀವಾದಿ ಜ್ಞಾನಮೀಮಾಂಸೆ – ಹೀಗೆ ಪಠ್ಯಕ್ರಮವನ್ನು ರೂಪಿಸುವ ಪ್ರಯತ್ನ ಮಾಡಿದೆವು.

◆ **ಜನಪ್ರಿಯ ಸಾಹಿತ್ಯದ ಬಗ್ಗೆ ನಿಮ್ಮ ಅನಿಸಿಕೆಗಳೇನು? ಅದರ ಪರಿಣಾಮಗಳು ಅಪಾಯಗಳ ಕುರಿತು ನಿಮ್ಮ ಅಭಿಪ್ರಾಯ...**

ಈ ಸಾಹಿತ್ಯದ ಪರಿಣಾಮ ಅನ್ನೋದಕ್ಕಿಂತ ಮೊದಲು ಯೋಚಿಸಬೇಕಾದದ್ದು ಸಾಹಿತ್ಯದ ಬಗೆಗಿನ ಮೌಲ್ಯಗಳನ್ನು ಸೃಷ್ಟಿ ಮಾಡಿದವರು ಯಾರು? ಅದರ ಬಗ್ಗೆ ಪೂರ್ವಗ್ರಹಗಳನ್ನ ಬಿತ್ತಿದ್ದು ಯಾರು? ಜನಪ್ರಿಯ ಸಾಹಿತ್ಯ ಅನ್ನೋ ಹಣೆಪಟ್ಟಿ ಹಚ್ಚಿ ಅದನ್ನು ಓದೋದು ಗಂಭೀರ ಓದು ಅಲ್ಲ ಅಂತನ್ನೋದು ಇದೆಯಲ್ಲ ಅದನ್ನು ನಿರ್ಧರಿಸಿದವರು ಯಾರು? ಗಂಭೀರ ಓದು ಅಲ್ಲವಾದರೆ ಆ ಜನಪ್ರಿಯ ಕಾದಂಬರಿಗಳು ಸಾಹಿತ್ಯ ವಲಯದ ಓದುಗರನ್ನು ಬಿಟ್ಟುಬಿಡಿ ಉಳಿದವರ ನಡುವೆ ಯಾಕಷ್ಟು ಜನಪ್ರಿಯವಾದವು? ಯಾಕಷ್ಟು ಆಕರ್ಷಣೆಯನ್ನು ಒಡ್ಡಿದವು? ಚಿಕ್ಕವಯಸ್ಸಿನಲ್ಲಿ ಹೆಣ್ಣುಮಕ್ಕಳಾಗಲಿ, ಗಂಡು ಮಕ್ಕಳಾಗಲಿ ಓದಲು ಶುರುಮಾಡುವುದು ಅದನ್ನೇ. ಓದಬೇಕು ಅನ್ನೋ ಚಪಲ ಹುಟ್ಟಿಸಿದ್ದು ಅದೇ ಸಾಹಿತ್ಯ. ಜನಪ್ರಿಯವಾದದ್ದು ಗಂಭೀರವಾದದ್ದು ಅಲ್ಲ ಯಾಕೆ? ಅನ್ನೋ ಪ್ರಶ್ನೆ ಹುಟ್ಟುತ್ತೆ. ಮಹಿಳೆಯರ ಸಾಹಿತ್ಯವನ್ನು ಅಡುಗೆಮನೆ ಸಾಹಿತ್ಯ ಅಂತ ಕರೆದರು. ಹೌದು ಅದು ಅವಳ ಲೋಕ. ಆದರೆ, ಆ ಲೋಕ ಕೂಡ ನಿಯಂತ್ರಿತವಾಗಿತ್ತು. ಹಾಗಿರುವಾಗ ಅವಳಿಗೆ ಕಾಣುವುದು ಪುರುಷ ಲೋಕ, ಪುರುಷ ಲೋಕ ಕಲಿಸಿದ ಪಾಠ ಮತ್ತು ಆಕೆಯ ದೃಷ್ಟಿ ಪುರುಷ ಮರುರೂಪಿಸಿದ ದೃಷ್ಟಿ.

ಈ ಸಾಹಿತ್ಯವನ್ನು ಬರೆದ ಮಹಿಳೆಯರು ಶಿಕ್ಷಣ ಪಡೆದವರಾಗಿದ್ದರೂ ಕೂಡ ಗಂಡು ಲೋಕದೃಷ್ಟಿಯನ್ನಿಟ್ಟುಕೊಂಡು ಬರೆದದ್ದು. ಹೆಣ್ಣು ಲೋಕದೃಷ್ಟಿಯಿಂದಲ್ಲ. ಸ್ತ್ರೀಸಂವೇದನೆ ಅಂತ ಹೇಳ್ತಾರಲ್ಲ ಸ್ತ್ರೀಸಂವೇದನೆ ಅಂದರೇನು ಅನ್ನೋದೇ ನಮಗೆ ಗೊತ್ತಿಲ್ಲ. ಇದು ಮೂಲಭೂತ ಸಮಸ್ಯೆ. ತಾಯಿ ಹೃದಯ, ಹೆಂಗರಳು ಅನ್ನೋ ತರಹದ ಪ್ರಯೋಗಗಳನ್ನೇ ನೋಡಿ ಅವು ಸ್ತ್ರೀ ಸಂವೇದನೆಯನ್ನ ಹೇಳುತ್ತೆ ಅನ್ನುತ್ತಾರೆ. ಆದರೆ, ಅದು ನಿಜವೇ?

ಜನಪ್ರಿಯ ಸಾಹಿತ್ಯವನ್ನ ಅಪಾಯ ಅಂತ ಯಾಕನ್ನಬೇಕು. ಅದೊಂದು ಸಾಧ್ಯತೆಯಾಗಿತ್ತು; ಹೆಂಗಸಿಗೆ ಅಭಿವ್ಯಕ್ತಿಸಬೇಕು ಅನ್ನುವ ತುಡಿತ ಏನಿತ್ತು ಅದಕ್ಕೊಂದು ದಾರಿ ಸಿಕ್ಕಿತು. ಆ ಜನಪ್ರಿಯ ಸಾಹಿತ್ಯದಲ್ಲಿ ಕಂಡ ಮಹಿಳಾ ಲೋಕ ಏನು ಹೇಳ್ತಿದೆ ಅಂತ ನೋಡಿ. ನನಗೆ ಬೇರೆದನ್ನು ಕಾಣೋಕೆ ಆಗ್ತಿಲ್ಲ ಅಂತ ಹೇಳ್ತಿದೆಯೋ ಅಥ್ವಾ ಕಾಣುವ ಸುಳ್ಳುಗಳನ್ನು ಭ್ರಮಿಸೋದನ್ನ ಹೇಳ್ತಿದೆಯೋ?

**‘ತಿಳಿವಳಿಕೆ ಅನ್ನುವುದು ಯಾವಾಗಲೂ ನೋವು ಕೊಡುವಂತದ್ದು. ಏನಾಗಿದೆ ಗೊತ್ತಾಗಿದೆ, ಏನಾಗಬೇಕು ಅಂತಲೂ ಗೊತ್ತಿದೆ ಆದರೆ ನೀವು ಅದಕ್ಕಾಗಿ ಏನೂ ಮಾಡಲಾರದವರಾಗಿರುತ್ತೀರಿ. ಇದು ನಿರಾಶವಾದವಲ್ಲ. ಆದರೆ, ಆ ಬದಲಾವಣೆಯ ಪ್ರಕ್ರಿಯೆಯಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುವುದು ಮುಖ್ಯವಾಗುತ್ತದೆ. ಕೊನೆ ಮುಟ್ಟದಿದ್ದರೂ ಆ ಪ್ರಕ್ರಿಯೆ ನಿರಂತರವಾಗಿ ಸಾಗುತ್ತಿರುವುದು ಮುಖ್ಯವಾಗುತ್ತದೆ.**

